**(ಇಂದು ದಿಃ 12-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 4 ಮತ್ತು 5 ನೇ ಪ್ರತಿವಾದಿಯರ ಪರ ಶ್ರೀ.TVP ವಕೀಲರಿಂದಃ-**

ದಾವ ಜಮೀನು ಹೊರತುಪಡಿಸಿ ನಮಗೆ ಸೇರಿದ ಇನ್ನೊಂದು ಜಮೀನು ಇದೆ. ದಾವಾ ಜಮೀನು ಇನ್ನೊಂದು ಜಮೀನಿನ ಕಾಸ್ರಾ ಪಹಣಿಗಳನ್ನು ನೋಡಿದ್ದೇನೆ. ಇನ್ನೊಂದು ಜಮೀನು 2 ಎಕರೆ ಇದೆ. ಸರ್ವೇ ನಂಬರ 398 ಕಾಸ್ರಾ ಪಹಣಿ ಪ್ರಕಾರ ವಿರಬದ್ರಪ್ಪ ಸಿದ್ದಪ್ಪ ಹುಂಡೆಕರ್ ರವರ ಹೆಸರಿನಲ್ಲಿತ್ತು ಎಂದರೆ ಸರಿ. ತದಾನಂತರ ಸದರಿ ಸರ್ವೇ ನಂಬರ ಈರಪ್ಪ ಸಿದ್ದಪ್ಪ ಎಂದು ಮುಟೇಷ ನ್ ಆಯಿತು ಎಂದರೆ ಸರಿ. ವಿರಬದ್ರಪ್ಪ ಮಗನ ಹೆಸರು ತಿಪ್ಪಣ್ಣ ಸಾಕ್ಷಿ ಮುಂದುವರೆದು ನನ್ನ ತಾತ ವಿರಬದ್ರಪ್ಪರವರಿಗೆ ಈರಪ್ಪ ಎಂದು ಕರೆಯುತ್ತಿದ್ದರು ಎಂದು ಹೇಳುತ್ತಾರ್ತೆ. ನನ್ನ ತಾತನ ಹೆಸರು ವಿರಬದ್ರಪ್ಪ @ ಈರಪ್ಪ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಈರಪ್ಪ ನಿಗೆ ಒಬ್ಬನೆ ಮಗ ತಿಪ್ಪಣ ಎಂದರೆ ನನ್ನ ತಂದೆ . ತಿಪ್ಪಣನವರಿಗೆ 3 ಗಂಡು ಮಕ್ಕಳು , ಒಬ್ಬಳು ಹೆಣ್ಣು ಮಗಳು .

ಸರ್ವೇ ನಂಬರ 166 /ಅ ಮೂತಹಃ ಈರಪ್ಪ ಸಂಗಪ್ಪ ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ, ಸರ್ವೇ ನಂಬರ 166 /ಆ ವಿರಬದ್ರಪ್ಪ ಸಿದ್ದಪ್ಪ ರವರ ಹೆಸರಿನಲ್ಲಿ ಮತ್ತು ಸರ್ವೇ ನಂಬರ 166 /ಇ ವಿರಬದ್ರಪ್ಪ ಬಸಲಿಂಗಪ್ಪ ರವರ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ. ಈರಪ್ಪ ಸಂಗಪ್ಪನ ಹೆಂಡತಿ ಯ ಹೆಸರು ಸಂಬವ್ವ ಎಂದರೆ ಸರಿಯಲ್ಲ.ಈರಪ್ಪ ಮತ್ತು ಸಂಬವ್ವ ನಿಗೆ 3 ಜನ ಮಕ್ಕಳು ಅವರುಗಳೆಂದರೆ ಚಂದ್ರಕಾಂತ , ಸಂಗಪ್ಪ ಮತ್ತು ನಾಗಣ್ಣ ಎಂದರೆ ಸರಿಯಲ್ಲ. 3 ರಿಂದ 5ನೇ ಪ್ರತಿವಾದಿಯರು ಚಂದ್ರಶೆಟ್ಟಿ , ಸಂಗಪ್ಪ ಮತ್ತು ನಾಗಣ್ಣನ ಹೆಂಡತಿಯರು ಎಂದರೆ ಸರಿಯಲ್ಲ. 3 ರಿಂದ 5 ನೇ ಪ್ರತಿವಾದಿಯರು ನನ್ನ ಜಮೀನಿನ ಕಬ್ಜಾಗೆ ತೊಂದರೆ ಕೊಡಲು ಬಂದರು ಕಾರಣ ಈ ದಾವೆ ಸಲ್ಲಿಸಿದ್ದೇನೆ. ಕಾಸ್ರ ಪಹಣಿಗಳು ಇದ್ದಾಗಿನಿಂದ 2013-14 ರವರೆಗೆ ಸರ್ವೇ ನಂಬರ 398/1 ಈರಪ್ಪ ಸಂಗಪ್ಪ ಹುಂಡೆಕರ್ ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ, ತದಾನಂತರ ನಾನು ತಹಶಿಲ್ದಾರ ಸೇಡಂ ರವರ ಮುಂದೆ ನನ್ನ ತಂದೆ ಈರಪ್ಪ ಸಂಗಪ್ಪ ಹುಂಡೆಕರ್ ತೀರಿ ಹೋಗಿದ್ದಾರೆ ಎಂದು ಸುಳ್ಳು ಅರ್ಜಿ ಕೊಟ್ಟು ಮುಟೇಷನ್ ಮಾಡಿಸಿಕೊಂಡೇವು ಎಂದರೆ ಸರಿಯಲ್ಲ, ತಹಶೀಲ್ದಾರರು ಮಂಜೂರು ಮಾಡಿದ್ದ ಮುಟೇಷ ನನ್ನು ಪ್ರಶ್ನೆ ಮಾಡಿ 3 ರಿಂದ 5 ನೇ ಪ್ರತಿವಾದಿಯರು

ಸಹಾಯಕ ಆಯುಕ್ತರು ಸೇಡಂ ರವರ ಮುಂದೆ ಮೇಲ್ಮನವಿ ಸಲ್ಲಿಸಿದರು , ಸದರಿ ಮೇಲ್ಮನವಿ ಮಂಜೂರಾಗಿ ತಹಶಿಲ್ದಾರರು ಮಂಜೂರು ಮಾಡಿದ್ದ ಮುಟೇಷನ್ ರದ್ದಾಯಿತು ಎಂದರೆ ಸರಿಯಲ್ಲ, ಅದೇ ರೀತಿ 1ನೇ ಪ್ರತಿವಾದಿ ಸಲ್ಲಿಸಿದ್ದ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿಯಲ್ಲ, ಈಗ ದಾವಾ ಜಮೀನು 3 ರಿಂದ 5 ನೇ ಪ್ರತಿವಾದಿಯರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ,

ನಾವು ತಹಶೀಲ್ದಾರರ ಮುಂದೆ ಅರ್ಜಿಯಲ್ಲಿ ದಾವಾ ಜಮೀನು ನನ್ನ ತಾತನ ತಮ್ಮನಾದ ಈರಪ್ಪ ಸಂಗಪ್ಪ ಹುಂಡೆಕರ್ ರವರ ಹೆಸರಿನಲ್ಲಿದ್ದು ಅವರು 23 ವರ್ಷಗಳ ಹಿಂದೆ ತೀರಿ ಹೋಗಿದ್ದು ಅವರಿಗೆ ಮಕ್ಕಳಿಲ್ಲದ ಕಾರಣ ನಾವೇ ಅವರ ವಾರಸುದಾರರು ಎಂದು ಹೇಳಿ ಬರೆಸಿದ್ದೇವೆ ಎಂದರೆ ಸರಿಯಲ್ಲ, ಈರಪ್ಪ ಸಿದ್ದಪ್ಪರವರ ಹೆಸರಿನಲ್ಲಿದ್ದ 2 ಎಕರೆ ಜಮೀನನ್ನು ನನ್ನ ಮುತ್ಯ ಈರಪ್ಪ ಅನ್ನ ಪೂರ್ಣರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ನನ್ನ ಮುತ್ಯ ಆತನ ಹೆಸರನ್ನು ಈರಣ್ಣ ಸಿದ್ದಪ್ಪ ಎಂದು ಹೇಳಿ ಬರೆಸಿದ್ದಾರೆ ಎಂದರೆ ಸರಿಯಲ್ಲ,ನನ್ನ ತಂದೆ ತಿಪಣ್ಣ ಈರಣ್ಣ ಎಂದು ಮತ್ತು ನನ್ನ ಅಜ್ಜಿ ಈರಮ್ಮ ಈರಣ್ಣ ಎಂದು 15.03.2000 ರ ಖರೀದಿ ಪತ್ರದಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ, ನನ್ನ ಮುತ್ಯ ನ ಹೆಸರು ಈರಪ್ಪ @ ವಿರಬದ್ರಪ್ಪ ಅವರ ತಂದೆಯ ಹೆಸರು ಸಂಗಪ್ಪ @ ಸಿದ್ದಪ್ಪ ಎಂದು ತೋರಿಸಲು ಪಡಿತರ ಚೀಟಿ ಮತ್ತು ಬೇರೆ ಯಾವುದೇ ದಾಖಲಾತಿ ಹಾರುಪಡಿಸಿಲ್ಲ,

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದು ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**